ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 57 ]
Total No. of Questions : 57 ]

**ಸಂಕೇತ ಸಂಖ್ಯೆ : 97-K**
**Code No. : 97-K**

**D**

**CCE PR**
**UNREVISED**
**REDUCED SYLLABUS**
**NSR & NSPR**

**Question Paper Serial No. 813**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Repeater / NSR & NSPR)**

ದಿನಾಂಕ : 13. 06. 2023 ] [ Date : 13. 06. 2023

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 100 ] [ Max. Marks : 100

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 57 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭಾರತದಲ್ಲಿ ಸಂವಿಧಾನ ರಚನಾ ಸಭೆಯ ಶಾಸನಾತ್ಮಕ ಸಲಹೆಗಾರರು

   (A) ಡಿ.ಪಿ. ಕೇತನ್

   (B) ಕೆ.ಎಂ. ಮುನ್ಷಿ

   (C) ಬಿ.ಎಲ್. ಮಿತ್ತರ್

   (D) ಬಿ.ಎನ್. ರಾವ್

2. ಭಾರತ ಸಂವಿಧಾನದ ಆತ್ಮ

   (A) ಪ್ರಸ್ತಾವನೆ

   (B) ವಯಸ್ಕ ಮತದಾನ

   (C) ಮೂಲಭೂತ ಹಕ್ಕುಗಳು

   (D) ಮೂಲಭೂತ ಕರ್ತವ್ಯಗಳು

3. "ಒಂದು ರಾಜ್ಯದ ದಕ್ಷತೆಯನ್ನು ಅದು ತನ್ನ ಜನತೆಗೆ ನೀಡಿರುವ ಹಕ್ಕುಗಳಿಂದ ತಿಳಿಯಬಹುದು" ಎಂದು ಹೇಳಿದವರು

(A) ಡಿ.ಡಿ. ಬಸು

(B) ವುಡ್ರೋ ವಿಲ್ಸನ್

(C) ಹೆಚ್.ಜೆ. ಲಾಸ್ಕೀ

(D) ಜಾನ್

4. ಭಾರತದ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಎರವಲು ಪಡೆದಿರುವುದು

(A) ಸ್ವಿಸ್ ಸಂವಿಧಾನದಿಂದ

(B) ಐರ್ಲೆಂಡ್ ಸಂವಿಧಾನದಿಂದ

(C) ಅಮೆರಿಕ ಸಂವಿಧಾನದಿಂದ

(D) ಫ್ರಾನ್ಸ್ ಸಂವಿಧಾನದಿಂದ

5. ಭಾರತ ಸಂವಿಧಾನ ಪ್ರಸ್ತಾವನೆಯನ್ನು ಅಳವಡಿಸಿಕೊಂಡಿದ್ದು

(A) 17ನೇ ಅಕ್ಟೋಬರ್, 1949

(B) 13ನೇ ಡಿಸೆಂಬರ್, 1946

(C) 14ನೇ ಆಗಸ್ಟ್, 1947

(D) 12ನೇ ಡಿಸೆಂಬರ್, 1949

6. ಎಲ್ಲಾ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ಸಂವಿಧಾನದ ವಿಧಿಗಳೆಂದರೆ

(A) 29 ರಿಂದ 36

(B) 12 ರಿಂದ 35

(C) 18 ರಿಂದ 36

(D) 19 ರಿಂದ 38

7. ಸಂವಿಧಾನದ ನಾಲ್ಕನೇ ಭಾಗವು ಒಳಗೊಂಡಿರುವುದು

(A) ಮೂಲಭೂತ ಹಕ್ಕುಗಳು

(B) ರಾಜ್ಯ ನಿರ್ದೇಶಕ ತತ್ವಗಳು

(C) ಸ್ಥಳೀಯ ಸರ್ಕಾರಗಳು

(D) ಸಂವಿಧಾನ ಪ್ರಸ್ತಾವನೆ

8. ಕೌಟಿಲ್ಯನಿಂದ ರಚಿತವಾದ ಕೃತಿ

(A) ಅರ್ಥಶಾಸ್ತ್ರ

(B) ಮುದ್ರಾರಾಕ್ಷಸ

(C) ರಾಜತರಂಗಿಣಿ

(D) ಲೀಲಾವತಿ

9. ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಛೇರಿ ಇರುವುದು

(A) ಮಂಗಳೂರು

(B) ಹುಬ್ಬಳ್ಳಿ

(C) ಮೈಸೂರು

(D) ಬೆಂಗಳೂರು

10. ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ

(A) ಲೋಕ ಅದಾಲತ್

(B) ಕಂದಾಯ ನ್ಯಾಯಾಲಯ

(C) ಉಚ್ಛ ನ್ಯಾಯಾಲಯ

(D) ಸಿವಿಲ್ ನ್ಯಾಯಾಲಯ

**II.** 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :** **5 × 1 = 5**

| ***A*-ಪಟ್ಟಿ** | ***B*-ಪಟ್ಟಿ** |
|---|---|
| (A) ಸಮವರ್ತಿ ಪಟ್ಟಿ | (i) ಇಂಗ್ಲೆಂಡ್ ಸಂವಿಧಾನ |
| (B) ಸಂವಿಧಾನ ತಿದ್ದುಪಡಿ ವಿಧಾನ | (ii) ರಷ್ಯಾ ಸಂವಿಧಾನ |
| (C) ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆ | (iii) ಕೆನಡಾ ಸಂವಿಧಾನ |
| (D) ಮೂಲಭೂತ ಕರ್ತವ್ಯಗಳು | (iv) ಜಪಾನ್ ಸಂವಿಧಾನ |
| (E) ಪ್ರಬಲ ಒಕ್ಕೂಟ ವ್ಯವಸ್ಥೆ | (v) ದಕ್ಷಿಣ ಆಫ್ರಿಕಾ ಸಂವಿಧಾನ |
| | (vi) ಐರ್ಲೆಂಡ್ ಸಂವಿಧಾನ |
| | (vii) ಆಸ್ಟ್ರೇಲಿಯಾ ಸಂವಿಧಾನ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **15 × 1 = 15**

12. ಮೈಸೂರು ಪ್ರಾಂತ್ಯದಿಂದ ಸಂವಿಧಾನ ರಚನಾ ಸಭೆಗೆ ನಾಮಕರಣಗೊಂಡ ಮುಸ್ಲಿಂ ಮಹಿಳಾ ಸದಸ್ಯರನ್ನು ಹೆಸರಿಸಿ.

13. ಕೆ.ಸಿ. ವ್ಹೀರ್‌ರವರು ಭಾರತದ ಸಂಯುಕ್ತ ವ್ಯವಸ್ಥೆಯನ್ನು "ಅರೆ ಸಂಯುಕ್ತ ವ್ಯವಸ್ಥೆ" ಎಂದು ಕರೆದಿದ್ದಾರೆ. ಏಕೆ ?

14. 1858 ರ ಶಾಸನವನ್ನು ಭಾರತದ ಮ್ಯಾಗ್ನಕಾರ್ಟ್ ಎಂದು ಬಣ್ಣಿಸಲಾಗಿದೆ. ಏಕೆ ?

15. ಭಾರತ ಸಂವಿಧಾನದ ಯಾವ ತಿದ್ದುಪಡಿಯ ಮೂಲಕ ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದು ಹಾಕಲಾಯಿತು ?

16. ಮಾಹಿತಿ ಹಕ್ಕು ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು ?

17. "ಒಂದು ವೇಳೆ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಅಕ್ಷರಶಃ ಅನುಷ್ಠಾನಗೊಳಿಸಿದ್ದೇ ಆದರೆ ಭಾರತವು ಭೂಮಿಯ ಮೇಲಿನ ಸ್ವರ್ಗವಾಗುತ್ತದೆ." ಎಂದು ಹೇಳಿದವರು ಯಾರು ?

18. 'ಜಾತ್ಯಾತೀತತೆ' ಪದವು ಯಾವ ತಿದ್ದುಪಡಿಯ ಮೂಲಕ ನಮ್ಮ ಸಂವಿಧಾನದ ಪ್ರಸ್ತಾವನೆಗೆ ಸೇರ್ಪಡೆಯಾಯಿತು ?

19. ಗ್ರಾಮಸಭೆಯ ಪದನಿಮಿತ್ತ ಅಧ್ಯಕ್ಷರು ಯಾರಾಗಿರುತ್ತಾರೆ ?

20. ರಾಜ್ಯ ಸರ್ಕಾರವು ವಿಚಾರಣಾ ಆಯೋಗಗಳನ್ನು ಏಕೆ ನೇಮಿಸುತ್ತದೆ ?

21. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರ ನೇಮಕಾತಿಯಲ್ಲಿ ರಾಷ್ಟ್ರಪತಿಗಳಿಗೆ ಸಲಹೆ ನೀಡುವವರು ಯಾರು ?

22. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎಂದರೇನು ?

23. ಭಾರತ ಒಂದು ಸಾರ್ವಭೌಮ ರಾಷ್ಟ್ರ. ಹೇಗೆ ?

24. ರಾಜ್ಯನೀತಿ ನಿರ್ದೇಶಕ ತತ್ವಗಳು ನ್ಯಾಯಾರ್ಹವಾದವುಗಳಲ್ಲ. ಏಕೆ ?

25. 'ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ' ಯು ಯಾವಾಗ ಜಾರಿಗೆ ಬಂದಿತು ?

26. ಸರ್ವೋಚ್ಚ ನ್ಯಾಯಾಲಯವನ್ನು 'ಹಕ್ಕುಗಳ ರಕ್ಷಕ' ಎಂದು ಏಕೆ ಕರೆಯಲಾಗಿದೆ ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**24 × 2 = 48**

27. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಹೇಗೆ ಪದಚ್ಯುತಿಗೊಳಿಸಬಹುದು ?

28. ಸಂವಿಧಾನ ಪ್ರಸ್ತಾವನೆಯ ಮೂಲಾಂಶಗಳನ್ನು ತಿಳಿಸಿ.

29. 'ಭ್ರಾತೃತ್ವ' ವನ್ನು ವ್ಯಾಖ್ಯಾನಿಸಿ.

30. ಗಾಂಧಿವಾದಿ ತತ್ವಗಳನ್ನು ಪಟ್ಟಿ ಮಾಡಿ.

31. ಕಂದಾಯ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?

32. ಮೂಲಭೂತ ಹಕ್ಕುಗಳ ಲಕ್ಷಣಗಳಾವುವು ?

33. ಶಿಕ್ಷಣ ಹಕ್ಕು ಕಾಯ್ದೆಯನ್ನು ಕುರಿತು ಬರೆಯಿರಿ.

34. ರಾಜ್ಯನೀತಿ ನಿರ್ದೇಶಕ ತತ್ವಗಳು ಏಕೆ ಅವಶ್ಯಕ ?

35. ಜಿಲ್ಲಾ ಪಂಚಾಯಿತಿಯ ಹಣಕಾಸಿನ ಮೂಲಗಳು ಯಾವುವು ?

36. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳು ಯಾವುವು ?

37. ಸಂವಿಧಾನ ತಿದ್ದುಪಡಿಯ ವಿಧಾನಗಳನ್ನು ಪಟ್ಟಿ ಮಾಡಿ.

38. ಭಾರತದ ರಾಜಕೀಯ ಪದ್ಧತಿಯ ನಾಲ್ಕು ತಾತ್ವಿಕ ಸ್ಥಂಭಗಳು ಯಾವುವು ?

39. ರಾಜ್ಯನೀತಿ ನಿರ್ದೇಶಕ ತತ್ವಗಳ ಉದಾರವಾದಿ ತತ್ವಗಳನ್ನು ತಿಳಿಸಿ.

40. 1919 ರ ಶಾಸನದ ಅಂಶಗಳು ಯಾವುವು ?

41. 1773 ರ ರೆಗ್ಯುಲೇಟಿಂಗ್ ಆ್ಯಕ್ಟ್‌ನ ಪ್ರಮುಖ ಅಂಶಗಳನ್ನು ತಿಳಿಸಿ.

42. 1935 ರ ಭಾರತ ಸರ್ಕಾರ ಕಾಯ್ದೆಯು ಜಾರಿಗೆ ತಂದ ಶಾಸನಗಳು ಯಾವುವು ?

43. ರಾಜ್ಯನೀತಿ ನಿರ್ದೇಶಕ ತತ್ವಗಳ ಲಕ್ಷಣಗಳು ಯಾವುವು ?

44. 'ಸಾರ್ವಭೌಮತ್ವ' ತತ್ವದ ಆಶಯವನ್ನು ವಿವರಿಸಿ.

45. ರಾಜ್ಯ ಲೋಕಸೇವಾ ಆಯೋಗ ಮತ್ತು ಜಂಟಿ ಲೋಕಸೇವಾ ಆಯೋಗದ ನಡುವಿನ ವ್ಯತ್ಯಾಸ ತಿಳಿಸಿ.

46. ಸಮಾನತೆಗೆ ಸಂಬಂಧಿಸಿದಂತೆ ನ್ಯಾಯದ ವಿಧಗಳನ್ನು ತಿಳಿಸಿ.

47. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕಿನ ಮಹತ್ವವೇನು ?

48. 'ಸಮಾನತೆ' ತತ್ವದ ಆಶಯವನ್ನು ವಿವರಿಸಿ.

49. ಗ್ರಾಮ ಪಂಚಾಯಿತಿಯ ಆಡಳಿತಾತ್ಮಕ ಸ್ಥಾಯಿ ಸಮಿತಿಗಳನ್ನು ವಿವರಿಸಿ.

50. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರು ಹಾಗೂ ಅಧ್ಯಕ್ಷರನ್ನು ಪದಚ್ಯುತಿಗೊಳಿಸುವ ಸಂದರ್ಭಗಳನ್ನು ತಿಳಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

51. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

52. ಭಾರತ ಸಂವಿಧಾನದ ಲಕ್ಷಣಗಳನ್ನು ಪಟ್ಟಿ ಮಾಡಿ.

53. ಉಚ್ಚ ನ್ಯಾಯಾಲಯವನ್ನು 'ದಾಖಲೆಗಳ ನ್ಯಾಯಾಲಯ' ಎಂದು ಕರೆಯಲು ಕಾರಣಗಳೇನು ?

54. ಸಮಾಜವಾದಿ ತತ್ವಗಳನ್ನು ವಿವರಿಸಿ.

55. ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದಾಗ ಸರ್ವೋಚ್ಚ ನ್ಯಾಯಾಲಯವು ಹೊರಡಿಸುವ ರಿಟ್‌ಗಳನ್ನು ಹೆಸರಿಸಿ.

56. ನಮ್ಮ ಸಂವಿಧಾನದ ಪ್ರಸ್ತಾವನೆಯನ್ನು ಬರೆಯಿರಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 1 × 4 = 4**

57. ನಗರ ಪಾಲಿಕೆಯ ಕಾರ್ಯಗಳನ್ನು ತಿಳಿಸಿ.